# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು-572 103
ದೂರವಾಣಿ : 0816-2254546, 0816-2255596, 0816-2255597 ಫ್ಯಾಕ್ಸ್ : 0816-2270719

ಸಂಖ್ಯೆ: ತು.ವಿ: ಸಾವಿ-03:ಗ.ಸ:3770/2017-18/ 3985 ದಿನಾಂಕ: 05.03.2018

**ಮರು ದರಪಟ್ಟಿ ಆಹ್ವಾನ**

ವಿಷಯ: ತುಮಕೂರು ವಿಶ್ವವಿದ್ಯಾನಿಲಯದ ಆಡಳಿತ ಕಛೇರಿ ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಮತ್ತು ವಿದ್ಯಾರ್ಥಿನಿಲಯಗಳಿಗೆ ಕುಡಿಯುವ ನೀರನ್ನು ಸರಬರಾಜು ಪಡೆಯುವ ಸೇವೆಗಾಗಿ ದರಪಟ್ಟಿ ಆಹ್ವಾನಿಸಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 27.02.2018

* * * *

ತುಮಕೂರು ವಿಶ್ವವಿದ್ಯಾನಿಲಯದ ಆಡಳಿತ ಕಛೇರಿ ಮತ್ತು ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಮತ್ತು ವಿದ್ಯಾರ್ಥಿನಿಲಯಗಳಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಸಂಬಂಧ ತಮ್ಮ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತಿರುತ್ತವೆ.

| ಕ್ರ.ಸಂ | ವಿವರ | ಉಲ್ಲೇಖಿತ ಮಾಡುವ ದರ (PerUnit) |
|---|---|---|
| 1 | 1/4 ಲೀಟರ್ ಬಾಟಲ್ | |
| 2 | 1/2 ಲೀಟರ್ ಬಾಟಲ್ | |
| 3 | 20 ಲೀಟರ್ ಕ್ಯಾನ್ | |

**ಷರತ್ತುಗಳು:**

1. ಸರಬರಾಜು ಸಂಸ್ಥೆಯವರು ತಮ್ಮ ಸಂಸ್ಥೆಯ BIS ಪ್ರಮಾಣ ಪತ್ರವನ್ನು ತಮ್ಮ ದರಪಟ್ಟಿಯೊಂದಿಗೆ ಸಲ್ಲಿಸ ತಕ್ಕದ್ದು.
2. ಸರಬರಾಜು ಸಂಸ್ಥೆಯವರು ತಮ್ಮ ಸಂಸ್ಥೆಯ ISI ಪ್ರಮಾಣ ಪತ್ರವನ್ನು ತಮ್ಮ ದರಪಟ್ಟಿಯೊಂದಿಗೆ ಸಲ್ಲಿಸ ತಕ್ಕದ್ದು.
3. ಸರಬರಾಜು ಸಂಸ್ಥೆಯವರು ತಮ್ಮ ಸಂಸ್ಥೆಯ GST No. ಮತ್ತು PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
4. ಕುಡಿಯುವ ನೀರಿನ ಕ್ಯಾನ್‌ಗಳ ಸರಬರಾಜನ್ನು ವಿಶ್ವವಿದ್ಯಾನಿಲಯವು ತಿಳಿಸುವ ಸ್ಥಳಗಳಿಗೆ / ವಿಭಾಗಗಳಿಗೆ / ಕಚೇರಿಗೆ ಸರಬರಾಜುದಾರರು ತಮ್ಮ ವೆಚ್ಚದಲ್ಲಿಯೇ ಸರಬರಾಜು ಮಾಡುವುದು.
5. ಸರಬರಾಜು ಮಾಡುವ Water can & dispenser ಗಳಿಗೆ ಪ್ರತ್ಯೇಕವಾಗಿ ಹಣ ಪಾವತಿಸುವುದಿಲ್ಲ.
6. ಸರಬರಾಜು ಮಾಡುವ Water can & dispenser ಗಳ ನಿರ್ವಹಣೆಯ ಜವಾಬ್ದಾರಿ ಸರಬರಾಜು ಸಂಸ್ಥೆಯವರದಾಗಿರುತ್ತದೆ.
7. ಸರಬರಾಜು ಮಾಡಲು ಯಾವುದೇ ಮುಂಗಡವನ್ನು ನೀಡಲಾಗುವುದಿಲ್ಲ.
8. ಸರಬರಾಜು ಆದೇಶದಲ್ಲಿ ತಿಳಿಸಿದ ಅವಧಿಯೊಳಗೆ ಅಥವಾ ವಿಸ್ತರಿಸಿದ ಅವಧಿಯೊಳಗೆ ಕುಡಿಯುವ ನೀರಿನ ಕ್ಯಾನ್‌ಗಳನ್ನು ಸರಬರಾಜು ಮಾಡಬೇಕು.
9. ಈ ದರಪಟ್ಟಿಯು ಒಂದು ಲಕ್ಷಕ್ಕೆ ಮಿತಿಗೊಳಪಟ್ಟಿರುತ್ತದೆ.
10. ಲಕೋಟೆಯ ಮೇಲೆ **ಕುಡಿಯುವ ನೀರನ್ನು ಸರಬರಾಜು ಕುರಿತು** ಎಂದು ನಮೂದಿಸಿ ಮುಚ್ಚಿದ ಲಕೋಟೆಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದ್ದು.
11. ದರಪಟ್ಟಿಯಲ್ಲಿ ನಮೂದಿಸುವ ದರಗಳು ತೆರಿಗೆ ಹಾಗೂ ಸೇವೆಯ ಮೊತ್ತವನ್ನು ಒಳಗೊಂಡಿರಬೇಕು.
12. ದರಪಟ್ಟಿಯನ್ನು ಅಂಗೀಕರಿಸುವಾಗ ಸಂಸ್ಥೆಗಳು ಸಲ್ಲಿಸಿದ ದರಪಟ್ಟಿಯ ಸರಾಸರಿ ಮೊತ್ತವನ್ನು ಪರಿಗಣಿಸಲಾಗುವುದು.
13. ಸರಬರಾಜು ಸಂಸ್ಥೆಯವರು ಅಧಿಕೃತ ಮಾರಾಟಗಾರರು/ಸರಬರಾಜುದಾರರು/ತಯಾರಕರು ಆಗಿದ್ದಲ್ಲಿ ದಾಖಲೆಗಳನ್ನು ಲಗತ್ತಿಸುವುದು.
14. ತಮ್ಮ ಸಂಸ್ಥೆಯು ಕುಡಿಯುವ ನೀರಿನ ಸರಬರಾಜಿನ ಸಮಯವನ್ನು ತಿಳಿಸುವುದು.
15. ಸರಬರಾಜುದಾರರು ನಮೂದಿಸುವ ದರಗಳು ಮೂರು ತಿಂಗಳ ಅವಧಿಯವರೆಗೆ ಚಾಲ್ತಿಯಲ್ಲಿರಬೇಕು.